**1 ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ತುಮಕೂರು**
**LAC.No. 142/2019**

**ಆರ್.ಡಬ್ಲ್ಯೂ. 2**

ದಿನಾಂಕಃ **30.11.2024** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಖ್ಯ ವಿಚಾರಣೆ ಎದುರುದಾರರ ಪರ ಶ್ರೀ. ಎಸ್.ಎಲ್.. ವಕೀಲರಿಂದ

ನಾನು ನನ್ನ ಮುಖ್ಯ ವಿಚಾರಣೆಯ ಬಾಬ್ತು ಪ್ರಮಾಣ ಪತ್ರವನ್ನು ಸಲ್ಲಿಸಿದ್ದು ಅದರಲ್ಲಿ ಬರೆದಿರುವ ಎಲ್ಲಾ ವಿಷಯಗಳು ಸತ್ಯವಾಗಿರುತ್ತವೆ. ನಾನೇ ಹೇಳಿ ಬರೆಸಿ ಸಹಿ ಮಾಡಿರುತ್ತೇನೆ.

ಪಾಟೀ ಸವಾಲುಃ ಅರ್ಜಿದಾರರ ಪರವಾಗಿಃ ಶ್ರೀ ಪಿ.ಆರ್.ಜೆ. ವಕೀಲರಿಂದಃ

ಒಬಳಾಪುರ ಗ್ರಾಮ ತುಮಕೂರು ಮಹಾನಗರ ಪಾಲಿಕೆವ್ಯಾಪ್ತಿಗೆ ಹತ್ತಿರದಲ್ಲಿದೆ ಎಂದರೆ ಸರಿಯಲ್ಲ. ಕೋರಾ ಹೋಬಳಿಯ ವ್ಯಾಪ್ತಿಗೆ ವಸಂತಾ ನರಸಾಪುರ ಸಹಾ ಸೇರಿರುತ್ತದೆ ಎಂದರೆ ಸರಿ. ವಸಂತಾನರಸಾಪುರ ಮತ್ತು ಒಬಳಾಪುರ ಹೊಂದಿಕೊಂಡಂತೆ ಇದೆ ಎಂದರೆ ಸರಿಯಲ್ಲ. ಕೆ.ಐ.ಎ.ಡಿಬಿ ರವರು ವಸಂತಾ ನರಸಾಪುರದ ಕೈಗಾರಿಕಾ ಉದ್ದೇಶಕ್ಕಾಗಿ ಸ್ವಾಧೀನಪಡಿಸಿಕೊಂಡ ಜಮೀನಿಗೆ 1 ಎಕರೆಗೆ 50 ಲಕ್ಷ ಪರಿಹಾರ ಪಾವತಿ ಮಾಡಿರುತ್ತಾರೆ ಎಂದರೆ ಗೊತ್ತಿಲ್ಲ. ಒಬಳಾಪುರದ ಗ್ರಾಮದ ಜಮೀನಿಗೆ ಪರಿಹಾರ ನಿಗಧಿಪಡಿಸುವ ವೇಳೆ ಅವೈಜ್ಞಾನಿಕ ಕ್ರಮ ಅನುಸರಿಸಿದ್ದೇನೆ ಎಂದರೆ ಸರಿಯಲ್ಲ. ತೋಟಗಾರಿಕೆ

ಇಲಾಖೆರವರು ನಿಗಧಿಪಡಿಸಿದ ಪರಿಹಾರವನ್ನು ಬೋರ್ ವೆಲ್ ಮತ್ತು ಮರಗಳಿಗೆ ನಿಗಧಿಪಡಿಸಿಲ್ಲ ಎಂದರೆ ಸರಿಯಲ್ಲ.

ಮರು ವಿಚಾರಣೆ ಇಲ್ಲ

**(**ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು**)**

ಓ**.**ಹೇ**.**ಕೇ**.**ಸರಿ ಇದೆ**.**

**1** ನೇ ಅಧಿಕ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು
ತುಮಕೂರು